ಜೀವ – ಹೀಗೆ ನಮ್ಮ ಬದುಕಿನ ಎಲ್ಲ ಸಂಗತಿಗಳನ್ನೂ ಅದು ಕ್ಷಣಾರ್ಧದಲ್ಲಿ ನಮ್ಮಿಂದ ಕಿತ್ತುಕೊಳ್ಳುವಷ್ಟು ಅಪಾಯಕಾರಿ. ಇಷ್ಟೆಲ್ಲ ಉಗ್ರಶಕ್ತಿಯನ್ನು ಪಡೆದಿರುವ ಕೋಪ ನಮ್ಮ ಸಹಜಗುಣವೆ? 'ಅಲ್ಲ' ಎನ್ನುತ್ತಿದೆ ಈ ಕಥೆ. ಇದರ ಬಗ್ಗೆ ನಾವು ಮನನ ಮಾಡಬೇಕಿದೆ.

ಕೋಪ ಏನೆಲ್ಲ ಅನಾಹುತಗಳನ್ನು ಮಾಡಬಲ್ಲದು? ಮೊದಲಿಗೆ ಅದು ನಮ್ಮ ಮನಸ್ಸನ್ನು ಉದ್ವೇಗಗೊಳಿಸುತ್ತದೆ. ಉದ್ವೇಗದಿಂದ ಮನಸ್ಸು ವಿಚಲಿತಗೊಂಡು ವಿನಯವನ್ನು ನಮ್ಮಿಂದ ದೂರ ಮಾಡುತ್ತದೆ. ಆಗ ಕೆಟ್ಟ ಮಾತುಗಳು ನಮ್ಮಿಂದ ಹೊರಡುತ್ತವೆ. ಇದರಿಂದಾಗಿ ಆತ್ಮೀಯರ ಸ್ನೇಹವನ್ನು ಕಳೆದುಕೊಳ್ಳುತ್ತೇವೆ. ಇದು ಜಗಳಕ್ಕೂ ಕಾರಣವಾಗಬಲ್ಲದು. ನಮ್ಮ ಜಗಳದ ವಿಷಯ ನಾಲ್ಕು ಜನರಿಗೆ ತಿಳಿಯುತ್ತದೆ; ಆ ಕಾರಣದಿಂದಾಗಿ ನಮ್ಮ ಹೆಸರು ಕೆಡುತ್ತದೆ. ಎಲ್ಲರೂ ನಮ್ಮನ್ನು ತುಚ್ಛವಾಗಿ ಕಾಣುವಂತಾಗುತ್ತದೆ. ಅಂತಿಮವಾಗಿ ಮನಸ್ಸಿನ ನೆಮ್ಮದಿಯೇ ನಮ್ಮಿಂದ  ಮಾಯವಾಗಿರುತ್ತದೆ.

ನಮ್ಮದಾಗಿರುವ ಜೀವನವನ್ನು ನಮ್ಮದಲ್ಲದ ಕೋಪದ ದೆಸೆಯಿಂದಾಗಿ ನಾವು ಕಳೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ನಾವು ಆಲೋಚಿಸಬೇಡವೆ?

ಕೋಪ ನಮ್ಮ ಬದುಕಿಗೆ ಆವಶ್ಯಕವಾಗಿದಿದ್ದರೆ ಅದು ನಮ್ಮ ಹುಟ್ಟಿನೊಂದಿಗೇ ಬರುತ್ತಿತ್ತು; ಆದರೆ ಅದಕ್ಕೂ ನಮ್ಮ ಹುಟ್ಟಿಗೂ ನೇರ ನಂಟಿಲ್ಲ; ನಾವು ಅದರೊದಿಂಗೆ ಅನಂತರದಲ್ಲಿ ಸಂಬಂಧವನ್ನು ಬೆಳೆಸಿದವರು. ಝೆನ್‌ಗುರು ಈ ವಿಷಯವನ್ನು ತುಂಬ ಮಾರ್ಮಿಕವಾಗಿ ಶಿಷ್ಯನಿಗೆ ಹೇಳಿದ್ದಾರೆ. ಕೋಪ ನಮ್ಮ ಸಹಜಸ್ವಭಾವವೇ ಆಗಿದ್ದರೆ ಅದು ಎಂದೂ ನಮ್ಮೊಂದಿಗೆ ಇರಬೇಕಾಗುತ್ತಿತ್ತು. ಆದರೆ ಅದು ಯಾವುದೋ ಸಮಯಲ್ಲಿ ಅನಿರೀಕ್ಷಿತವಾಗಿ ಕಾಣಿಸಿಕೊಳ್ಳುವಂಥದ್ದು – ಎನ್ನುತ್ತಿದ್ದಾನೆ ಶಿಷ್ಯ. ನಮ್ಮ ಜೊತೆಯಲ್ಲಿಯೇ ಇರುವುದಾಗಿದ್ದರೆ ಅದನ್ನು ಯಾವಾಗ ಬೇಕಾದರೂ ತೋರಿಸಬಹುದು; ಆದರೆ ಹಾಗೆ ಆಗುತ್ತಿಲ್ಲ, ಎಂದರೆ ಅದು ನಮ್ಮೊಂದಿಗಿಲ್ಲ; ನಾವು ಅದನ್ನು ಎರವಲು ಪಡೆಯುತ್ತಿದ್ದೇವೆ ಎಂದೇ ಅರ್ಥ. ಇದರ ಬಗ್ಗೆ ಆಲೋಚಿಸು ಎಂದು ಶಿಷ್ಯನಿಗೆ ಗುರು ಉಪದೇಶಿಸುತ್ತಿದ್ದಾರೆ.

ಕೋಪದ ಹುಟ್ಟಿನ ಕಾರಣವನ್ನೂ, ಅದು ಹೇಗೆ ಹಂತ ಹಂತವಾಗಿ ಅಪಾಯಗಳನ್ನು ಒಡ್ಡುತ್ತದೆಯೆಂದೂ ಗೀತೆಯಲ್ಲಿ ಸೊಗಸಾಗಿ ಹೇಳಲಾಗಿದೆ. ಮೊದಲು ನಾವು ಯಾವುದಾದರೊಂದು ವಸ್ತುವನ್ನು ನೋಡುತ್ತೇವೆ; ಅದು ನಮಗೆ ಬೇಕು ಎಂದೆನಿಸುತ್ತದೆ; ಇದೇ ಆಸಕ್ತಿ. ಇದರಿಂದ ಆ ವಸ್ತುವಿನ ಬಗ್ಗೆ ನಮ್ಮಲ್ಲಿ ಕಾಮ ಹುಟ್ಟುತ್ತದೆ. ಕಾಮ ಎಂದರೆ ಬಯಕೆ. ನಮ್ಮ ಬಯಕೆ ಈಡೇರದಿದ್ದಾಗ ಹತಾಶೆಯ ಭಾವ ತಲೆದೋರುತ್ತದೆ; ಅದೇ ನಮ್ಮಲ್ಲಿ ಕೋಪವನ್ನು ಉಂಟುಮಾಡುವುದು. ಕೋಪ ನಮ್ಮ ಬುದ್ಧಿಯನ್ನು ಅಪಹರಿಸುತ್ತದೆ; ಆಗ 'ಇದನ್ನು ಮಾಡಬೇಕು', 'ಇದನ್ನು ಮಾಡಬಾರದು' ಎಂಬ ತಿಳಿವಳಿಕೆಯನ್ನೇ ಕಳೆದುಕೊಳ್ಳುತ್ತೇವೆ. ವಿವೇಕದಿಂದ ವಂಚಿತರಾಗಿರುವ ನಮಗೆ ನಾವು ಯಾರು ಎನ್ನುವುದೇ ಮರೆತುಹೋಗುತ್ತದೆ. ಯಾವಾಗ ನಮ್ಮ ಬಗ್ಗೆ ನಮಗೇ ಅರಿವಿಲ್ಲದ ಸ್ಥಿತಿ ಎರಗಿದೆಯೋ ಆಗ ಸಂಪೂರ್ಣ ಬುದ್ಧಿನಾಶ ಆಗಿದೆಯೆಂದೇ ಅರ್ಥ. ಹೀಗೆ ಬುದ್ಧಿಹೀನನಾದ ಮನುಷ್ಯ ಎಲ್ಲವನ್ನೂ ಕಳೆದುಕೊಂಡಂತೆಯೇ ಸರಿ. ಇಷ್ಟೆಲ್ಲ ಅನಾಹುತಗಳ ಪರಂಪರೆಯೇ ನಡೆಯುವುದು ನಮ್ಮದಲ್ಲದ ಕೋಪದ ಕಾರಣದಿಂದ. ಇದು ಸೋಜಿಗವಲ್ಲದೆ ಮತ್ತೇನು?